ಪೂಜಾರಿ ವೈದ್ಯರೂ ಮಂತ್ರವಾದಿಗಳೂ ಆಶ್ರಮವನ್ನು ಹುಡುಕಿಕೊಂಡು ಬರುತ್ತಿದ್ದಾರೆ. ಎಲ್ಲರ ಬಳಿಯೂ ಬಾಪುವನ್ನು ಕಾಪಾಡುವ ಒಂದು ಸಂಜೀವಿನಿ ಔಷಧಿ ಇರುತ್ತದೆ.

"ಒಂದು ನಿಮಿಷ" ಎಂದರು ಪೂಲ್ಚಂದ್ರ. ಹಳ್ಳವನ್ನು ಸಮೀಪಿಸಿ ಹೊಟ್ಟು, ಮಣ್ಣು, ಮಲವೂ ಕಲೆತ ಬೆರಕೆಯನ್ನು ಅದರಲ್ಲಿ ಸುರಿದು ಮಡಕೆಯನ್ನು ತೊಳೆದು ಒಳಗೆ ಸುರಿದನಂತರ ಗುದ್ದಲಿಯಿಂದ ಮಣ್ಣನ್ನು ಅಗೆದು ಒಳಗೆ ಸರಿಸಿ ಮುಚ್ಚಿದರು. ಸನ್ಯಾಸಿ ಅವರು ಮಾಡುವುದನ್ನು ನೋಡುತ್ತಾ ಅಲ್ಲೇ ನಿಂತಿದ್ದರು.

ಪೂಲ್ಚಂದ್ರರು ಒಳಗೆ ಹೋದರು. ಆಶ್ರಮದ ಸರಳವಾದ ಬಿದಿರಿನ ಗುಡಿಸಲಿನೊಳಗೆ ನಾಟಿಮರದ ಹಲಗೆಗಳನ್ನು ಜೋಡಿಸಿ ಮಾಡಿದ ಮಂಚದ ಮೇಲೆ ಬಾಪು ಮಲಗಿದ್ದರು. ಅವರು ನಿದ್ರೆ ಮಾಡುತ್ತಿರಲಿಲ್ಲ ಎಂಬುದು ಪೂಲ್ಚಂದ್ರರ ಹೆಜ್ಜೆಯ ಶಬ್ದ ಕೇಳಿ ಅವರ ಮುಚ್ಚಿದ ರೆಪ್ಪೆಗಳು ಅಲುಗಿದ ಬಗೆಯಲ್ಲಿ ತಿಳಿಯಿತು. ಹನ್ನೆರಡು ದಿನಗಳಲ್ಲಿ ಬಾಪು ಬಹಳವೇ ಸಣ್ಣಗಾಗಿದ್ದರು. ಮಜ್ಜೆಯೇ ಇಲ್ಲದ ಸಣಕಲಾದ ದೃಢವಾದ ದೇಹ ಅವರದು. ಕಾಡ್ಗಿಚ್ಚಿನ ಬಳಿಕ ಚೇಗು ಮಾತ್ರವೇ ಉಳಿಯುವ ರೆಂಬೆಯಂತಹದ್ದು ಅವರ ದೇಹ ಎಂದು ಪೂಲ್ಚಂದ್ರ ಅಂದುಕೊಳ್ಳುವುದುಂಟು. ಅವರ ಊರಿನಲ್ಲಿ ಅಂತಹ ಕೋಲುಗಳನ್ನು ಹುಡುಕಿ ತೆಗೆದುಕೊಂಡು ಬಂದು ಗದ್ದೆಯ ಕೆಸರಿನಲ್ಲಿಳಿದು ಕೆಲಸ ಮಾಡುವಾಗ ಊರಿಕೊಂಡು ನಡೆಯಲು ಬಳಸುತ್ತಾರೆ. ಬಂಗಾಲದ ಕೆಸರಿನ ಗದ್ದೆಗಳಲ್ಲಿ ಯಾವ ಕೋಲೂ ಒಂದು ವರ್ಷ ಸಹ ತಾಳದು. ಆದರೆ ಕಾಡ್ಗಿಚ್ಚಿನಲ್ಲಿ ದೊರಕುವ ಈ ಕೋಲುಗಳು ತಲೆಮಾರುಗಳನ್ನು ದಾಟಿಯೂ ಉಪಯೋಗದಲ್ಲಿರುತ್ತವೆ.

ಆದರೆ ಬಾಪೂ ಗಂಟು ಸಡಿಲವಾದ ಕಡ್ಡಿಗಳ ಕಟ್ಟಿನಂತೆ ಆಗಿದ್ದರು. ಕೃಷ್ಣ ಜನ್ಮಾಷ್ಟಮಿಯ ಬೆಳಗ್ಗೆ ಅವರು ಆಶ್ರಮಕ್ಕೆ ಬಂದಿದ್ದರು. ಆಗಲೇ ಅವರಿಗೆ ಹುಷಾರಿರಲಿಲ್ಲ. ಕಡಲೆಕಾಯಿ ತುಪ್ಪ, ನಿಂಬೆ ಹಣ್ಣು, ಹಣ್ಣುಗಳನ್ನು ಮಾತ್ರವೇ ಅವರು ಆಹಾರವಾಗಿ ಸೇವಿಸುತ್ತಿದ್ದರು. ಕಡಲೆಕಾಯಿ ತುಪ್ಪವನ್ನು ಎರಡು ಚಮಚಕ್ಕಿಂತ ಹೆಚ್ಚಾಗಿ ತಿಂದು ಚೇತರಿಸಿಕೊಂಡವರನ್ನು ಪೂಲ್ಚಂದ್ರರು ನೋಡಿರಲಿಲ್ಲ. ಹೊಟ್ಟೆ ತೊಳಸುವಾಗ ಬಾಪೂ ತಿನ್ನುವುದನ್ನು ನಿಲ್ಲಿಸಿಬಿಡುತ್ತಾರೆ. ಒಂದು ದಿನ ಉಪವಾಸಮಾಡಿ ಕರುಳು ಮುದುಡಿ ಹೊಟ್ಟೆ ಶಾಂತವಾದಾಗ ಮತ್ತೆ ಅದೇ ಆಹಾರ.

ಕೃಷ್ಣ ಜನ್ಮಾಷ್ಟಮಿಯಂದು ಬೇಳೆಯ ಪಾಯಸ ಮಾಡಬೇಕೆಂದು ಆಶ್ರಮದಲ್ಲಿ ಮಕ್ಕಳು ಆಸೆಪಟ್ಟರು. ಮಕ್ಕಳ ಪರವಾಗಿ ರೇಣು ಹೋಗಿ ಕಸ್ತೂರ ಬಾ ಬಳಿ ಹೇಳಿದರು. ಆಶ್ರಮದ ನಿಧಿಯನ್ನು ನಿರ್ವಹಿಸುತ್ತಿದ್ದ ಪ್ರಾಧ್ಯಾಪಕ ಕೋಸಂಬಿ ಅಂತಹದ್ದೊಂದು ವಿಶೇಷ ಆಹಾರಕ್ಕೆ ಆಶ್ರಮದ ನಿಯಮಗಳಲ್ಲಿ ಅವಕಾಶವಿಲ್ಲ ಎಂದು ಹೇಳಿಬಿಟ್ಟರು. ಆದರೆ ಕಸ್ತೂರ ಬಾ ಆ ಖರ್ಚನ್ನು ನಾಲ್ಕು ದಿನ ಉಪವಾಸವಿದ್ದು ತಾನು ಸರಿದೂಗಿಸುವುದಾಗಿ ಹೇಳಿದಾಗ ಕೋಸಂಬಿಯಿಂದ ಏನನ್ನೂ ಹೇಳಲಾಗಲಿಲ್ಲ. ಅವರು ಗೊಂದಲಕ್ಕೊಳಗಾದವರಂತೆ ತಲೆಯನ್ನು ಪೆನ್ಸಿಲಿನಿಂದ ಕೆರೆದುಕೊಂಡರು.

ಬಾಪೂ ರಾತ್ರಿ ಬಂದರು. ದಣಿದಿದ್ದರು. ಬಾ ಅವರಿಗೆ ಬಿಸಿನೀರು ಕಾಯಿಸಿ ಕೊಟ್ಟರು. ಬಹಳ ದೂರ ನಡೆದ ಕಾಲುಗಳು ಮಣ್ಣ ಕೊಳಕಿನಿಂದ ಅಗೆದು ತೆಗೆದ ಗಡ್ಡೆಗಳಂತಿದ್ದವು. ಬಾ ಅವನ್ನು ಹಬೆಯಾಡುವ ಬಿಸಿನೀರಿನಿಂದ ಉಜ್ಜಿ ತೊಳೆದರು. ಬಾಪೂ ತನ್ನ ಮಣೆಯ ಮೇಲೆ ಕುಳಿತಾಗ ಬಾ ಬಿಸಿಯಾದ ಬೇಳೆ ಪಾಯಸವನ್ನು ತಂದು ಅವರಿಗೆ ಕೊಟ್ಟರು. ಬಾಪೂ ಹುಬ್ಬು ಗಂಟಿಕ್ಕಿಕೊಂಡು ತಲೆಯೆತ್ತಿ ನೋಡಿದಾಗ, "ಇದು ಮಕ್ಕಳಿಗಾಗಿ ಮಾಡಿದ್ದು... ಇಂದು ಕೃಷ್ಣ ಜನ್ಮಾಷ್ಟಮಿ. ಇದರ ಖರ್ಚನ್ನು ನಾನು ಉಪವಾಸವಿದ್ದು ಸರಿದೂಗಿಸುವುದಾಗಿ ಕೋಸಂಬಿಯ ಬಳಿ ಹೇಳಿದ್ದೇನೆ" ಎಂದರು.

ಮುಗುಳ್ನಗುತ್ತಾ ಬಾಪೂ ಆ ಲೋಟವನ್ನು ತೆಗೆದುಕೊಂಡು ಕುಡಿದರು. ಅವರ ಮುಖ ಅರಳುವುದನ್ನು ಪೂಲ್ಚಂದ್ರರು ನೋಡಿದರು. ಅವರೊಳಗೆ ಒಂದು ಮಗು ಇದೆ. ಅದು ಆಡಲು